‘ಸ್ಯಾಮ್, ನೀನು ಬೇಗ ಹೋಗಿ ಬೇಗ ಬಂದು ಬಿಡು. ಒತ್ತೆ ಹಣ ನಾವು ಸಾವಿರ ಡಾಲರುಗಳಿಗೆ ಇಳಿಸಬೇಕಾಗಿತ್ತು ಎಂದು ನನಗೆ ಯಾಕೋ ಅನಿಸುತ್ತಿದೆ... ಹೇಯ್ ಮರಿ ರಾಕ್ಷಸ... ನೀನು ನನ್ನ ಪಕ್ಕೆಗಳಿಗೆ ಒದೆಯುವುದನ್ನು ನಿಲ್ಲಿಸುತ್ತೀಯಾ ಇಲ್ಲಾ?... ಇಲ್ಲಾಂದ್ರೆ ಎದ್ದು ಬಂದು ಕಪಾಳಕ್ಕೆ ಎರಡು ಬಾರಿಸುತ್ತೇನೆ.’ ಬಿಲ್ಲ್ ಗುಟುರು ಹಾಕುತ್ತಿದ್ದಂತೆ ನಾನು ಲಗುಬಗೆಯಿಂದ ಅಲ್ಲಿಂದ ಜಾಗ ಖಾಲಿ ಮಾಡಿದೆ.

ನಾನು ಪೋಪ್ಲಾರ್ ಕೋವಿನ ಪೋಸ್ಟ್ ಆಫೀಸಿನ ಬಳಿ ಬಂದು ಕುಳಿತೆ. ಇದಕ್ಕೆ ಒತ್ತಿಕೊಂಡಂತೆಯೇ ಒಂದು ಸಣ್ಣ ಗೂಡಂಗಡಿ ಇತ್ತು. ಅಂಗಡಿಗೆ ಬಂದವರಲ್ಲಿ ಕೆಲವರು ಸಮ್ಮಿಟಿನಲ್ಲಿ ಡೋರ್ಸೆಟನ ಮಗನ ಅಪಹರಣದ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು. ನಾನು ಕೂಡ ಈ ಸುದ್ದಿಗಾಗಿಯೇ ಕಾಯುತ್ತಿದ್ದೆ. ಯಾರಿಗೂ ಸಂಶಯ ಬರದಂತೆ ಕಾಗದವನ್ನು ಅಂಚೆ ಡಬ್ಬಿಗೆ ಹಾಕಿ ನಾನು ಅಲ್ಲಿಂದ ಹೊರಟು ಬಂದೆ.

**9**

ನಾನು ಗುಹೆಗೆ ಬಂದಾಗ ಅಲ್ಲಿ ಬಿಲ್ಲ್ ಮತ್ತು ಹುಡುಗ ಇಬ್ಬರೂ ಕಾಣಿಸಲಿಲ್ಲ. ನಾನು ಸುತ್ತಲೂ ಎರಡು ಸುತ್ತು ಹಾಕಿದೆ. ಆದದ್ದು ಹಾಗಲಿ ಎಂದು ಜೋರಾಗಿ ‘ಕೂ’ ಹಾಕಿ ಒಂದು ಬಂಡೆಯ ಮೇಲೆ ಕುಳಿತುಕೊಂಡು ಪೈಪ್ ಹಚ್ಚಿದೆ.

ಅರ್ಧ ಗಂಟೆಯ ನಂತರ ಮುಂದಿನ ಕುರುಚಲು ಗಿಡಗಳು ಅಲ್ಲಾಡಿದಂತಾಯಿತು. ಅದರೊಳಗಿಂದ ಬಿಲ್ಲ್ ಹೊರ ಬಂದ. ತುಂಬಾ ಸುಸ್ತಾದವನಂತೆ ಕಾಣಿಸುತ್ತಿದ್ದ. ಅವನ ಹಿಂದೆ ಹತ್ತು ಹನ್ನೆರಡು ಅಡಿಗಳ ದೂರದಲ್ಲಿ ಹುಡುಗ ಪ್ರತ್ಯಕ್ಷನಾದ. ಅವನು ತುಂಬಾ ಖುಷಿಯಲ್ಲಿದ್ದ. ಬಿಲ್ಲ್ ತನ್ನ ಕೆಂಪು ಕರವಸ್ತ್ರದಿಂದ ಮುಖವನ್ನೊರೆಸಿ,

‘ಸ್ಯಾಮ್, ನೀನು ಏನೇ ಹೇಳು. ಒಬ್ಬ ಗಂಡಸಿನ ಸಹನೆಗೂ ಒಂದು ಮಿತಿ ಇದೆ. ನಮ್ಮ ಯೋಜನೆ ವಿಫಲವಾಯ್ತು ಸ್ಯಾಮ್. ನಾನು ಮೋಸ ಮಾಡಿದೆ ಎಂದು ನೀನು ಖಂಡಿತ ದೂರುತ್ತೀಯಾ. ನನಗೆ ಗೊತ್ತು. ಪರವಾಗಿಲ್ಲ. ಇಂತಾ ಅವಮಾನ ಜೀವಮಾನದಲ್ಲಿ ಎಂದೂ ಅನುಭವಿಸಿರಲಿಲ್ಲ.’

‘ಸಮಾಧಾನ ಬಿಲ್ಲ್. ಏನಾಯ್ತು?’

‘ಏನಾಯ್ತು ಅಂತೀಯಾ ಸ್ಯಾಮ್? ತೊಂಬತ್ತು ಮೈಲಿ ಒಂದು ಕುದುರೆ ಓಡುವುದೆಂದರೆ ಏನೆಂದುಕೊಂಡಿದ್ದೀಯಾ? ಆ ಬಿಳಿಯರ ಕ್ಯಾಂಪಿಗೆ ಹೋದ ನಂತರ ತಿನ್ನಲಿಕ್ಕಾದರೂ ಏನಾದರೂ ಉಂಟೆ? ಒಂದು ಮುಷ್ಟಿ ಓಟ್ಸ್! ಅಂದರೆ ಮರಳು! ಹುಡುಗನಿಗೆ ಸಮ್ಮಿಟಿಗೆ ವಾಪಸ್ಸು ಕಳಿಸಿದೆ! ಅವನೇನು ಸಲೀಸಾಗಿ ಹೋಗಲಿಲ್ಲ ಬಿಡು. ನಾನು ದರದರನೆ ಗುಡ್ಡದ ತಳದವರೆಗೂ ಎಳೆದುಕೊಂಡೇ ಹೋದೆ. ಅವನ ಒದೆತಗಳಿಂದಾಗಿ ಮಂಡಿ ಕೆಳಗೆ ನನ್ನ ಕಾಲುಗಳು ನೀಲಿಗಟ್ಟಿವೆ. ನನ್ನ ಕೈಗಳನ್ನು ನೋಡು. ಅವನು ಕಚ್ಚಿದ, ಪರಚಿದ ಗಾಯಗಳು ಕಾಣಿಸುತ್ತಿವೆಯೇ? ಕೊನೆಗೆ ಅವನ ಉಪಟಳ ತಾಳಲಾರದೆ ಕುಂಡಿಯ ಮೇಲೆ ಒದ್ದೆ ನೋಡು... ಸಾರಿ ಸ್ಯಾಮ್.’

**10**

ಏದುಸಿರು ಬಿಡುತ್ತಿದ್ದ ಬಿಲ್ಲ್‌ನಿಗೆ ನಾನು ಕೇಳಿದೆ:

‘ಬಿಲ್ಲ್, ನಿನ್ನ ಕುಟುಂಬದಲ್ಲಿ ಯಾರಿಗಾದರೂ ಹೃದಯದ ಕಾಯಿಲೆ ಇಲ್ಲ ತಾನೆ?’